ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಆದರೆ ದೂರು ಪ್ರಾಧಿಕಾರದಲ್ಲಿ ಬಹಳಷ್ಟು ಪೋಲಿಸ್ ಅಧಿಕಾರಿಗಳು ಭಾಗಿಯಾಗಿದ್ದಾರೆ, ಅವರ ಮೇಲೆ ಇನ್ನೂ ಸರಿಯಾಗಿ ಕ್ರಮವನ್ನು ತೆಗೆದುಕೊಂಡಿಲ್ಲ. ಆದುದರಿಂದ ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ದೂರು ಪ್ರಾಧಿಕಾರಕ್ಕೆ ಬರುವ ಎಲ್ಲಾ ದೂರುಗಳನ್ನು ಈಗಾಗಲೇ ಸರಿಯಾದ ರೀತಿಯಲ್ಲಿ enquiry ಮಾಡುತ್ತಿದ್ದಾರೆ, ಆದುದರಿಂದ ಅದು ಸರಿಯಾದ ರೀತಿಯಲ್ಲಿ ನಡೆಯುತ್ತಿದೆ.

ಅಧ್ಯಕ್ಷರು:– ಯಶವಂತರಾಯಗೌಡ ಇಲ್ಲ, ಡಾ॥ ಮಾಲಕರೆಡ್ಡಿಯವರೆ ನಿಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

ಠಾಣೆ ಮತ್ತು ವಸತಿ ಗೃಹಗಳು

94 (890); ಶ್ರೀ ಶ್ರೀನಿವಾಸ್ ಜಿ.ಎಚ್. (ತರೀಕೆರೆ)

ಅ) ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಪಟ್ಟಣದಲ್ಲಿ ಪೊಲೀಸ್ ಇಲಾಖೆಯ ಹೆಸರಿನಲ್ಲಿ ಇರುವ ಜಾಗವೆಷ್ಟು;

ಆ) ತರೀಕೆರೆ ಪಟ್ಟಣದ ಪೊಲೀಸ್ ಆರಕ್ಷಕರ ಠಾಣೆ ಹಾಗೂ ಗ್ರಾಮಾಂತರ ಆರಕ್ಷಕರ ಠಾಣೆಯಲ್ಲಿ ಒಟ್ಟು ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು;

ಇ) ತರೀಕೆರೆ ಪಟ್ಟಣದಲ್ಲಿರುವ ಪೊಲೀಸ್ ಇಲಾಖೆಯ ವಸತಿ ಗೃಹಗಳ ಸಂಖ್ಯೆ ಎಷ್ಟು; ಅವಶ್ಯಕತೆ ಇರುವ ವಸತಿಗೃಹಗಳ ಸಂಖ್ಯೆ ಎಷ್ಟು;

ಈ) ತರೀಕೆರೆ ಪಟ್ಟಣದಲ್ಲಿ ನೂತನವಾಗಿ ಪೊಲೀಸ್ ವಸತಿಗೃಹಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ತರೀಕೆರೆ ತಾಲ್ಲೂಕು ಮಾಚೇನಹಳ್ಳಿ ಸರ್ವೆ ನಂ. 97/1ಎ ರಲ್ಲಿ 3.38 ಎಕರೆ ಮತ್ತು ಸ.ನಂ. 97/08 ರಲ್ಲಿ 2.14 ಎಕರೆ ಒಟ್ಟು 6.12 ಎಕರೆ ಜಮೀನು ಇರುತ್ತದೆ.

ಆ) ತರೀಕೆರೆ ಪಟ್ಟಣದ ಪೊಲೀಸ್ ಆರಕ್ಷಕರ ಠಾಣೆಯಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಕೆಳಕಂಡಂತಿದೆ.

ಹುದ್ದೆ	ಮಂಜೂರಾತಿ ಬಲ	ವಾಸ್ತವ ಬಲ	ಖಾಲಿ ಸ್ಥಾನ
ಪಿಐ	1	1	0
ಪಿಎಸ್ಐ	2	1	1
ಎಎಸ್ಐ	4	3	1
ಸಿಹೆಚ್‌ಸಿ/ಮಹೆಚ್‌ಸಿ	11	11	0
ಸಿಪಿಸಿ/ಮಪಿಸಿ	38	28	10
ಒಟ್ಟು	**56**	**44**	**12**

ತರೀಕೆರೆ ತಾಲ್ಲೂಕಿನಲ್ಲಿ ಪೊಲೀಸ್ ಗ್ರಾಮಾಂತರ ಠಾಣೆ ಇರುವುದಿಲ್ಲ.

ಇ) ಹಂಚಿಕೆ ಮಾಡಲಾದ ವಸತಿ ಗೃಹಗಳ ಸಂಖ್ಯೆ ಮತ್ತು ಅವಶ್ಯಕತೆ ಇರುವ ವಸತಿ ಗೃಹಗಳ ಸಂಖ್ಯೆಯ ವಿವರ ಕೆಳಗಿನಂತಿದೆ.

ಹುದ್ದೆ	ಹಂಚಿಕೆ ಮಾಡಲಾದ ವಸತಿಗೃಹಗಳು	ಹಂಚಿಕೆ ಮಾಡಬೇಕಾಗಿರುವ ವಸತಿಗೃಹಗಳು	ಶೇಕಡವಾರು
ಪಿಐ	1	0	66%
ಪಿಎಸ್ಐ	1	0	
ಎಎಸ್ಐ	0	4	
ಸಿಹೆಚ್‌ಸಿ/ಮಹೆಚ್‌ಸಿ	2	9	
ಸಿಪಿಸಿ/ಮಪಿಸಿ	33	5	
ಒಟ್ಟು	**37**	**18**	

ಈ) ತರೀಕೆರೆ ಪಟ್ಟಣದ ಪೊಲೀಸ್ ಠಾಣೆಯ ಸಿಬ್ಬಂದಿಗಳಿಗೆ ಮಂಜೂರಾತಿ ಬಲದೊಂದಿಗೆ ಹೋಲಿಸಿದಾಗ ಶೇಕಡ 66 ರಷ್ಟು ಸಿಬ್ಬಂದಿಗಳಿಗೆ ವಸತಿಗೃಹ ಒದಗಿಸಲಾಗಿದೆ. ಉಳಿದಂತೆ ಅವಶ್ಯಕವಿರುವ ವಸತಿಗೃಹಗಳನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಶ್ರೀನಿವಾಸ್ ಜಿ.ಹೆಚ್.:– ಮಾನ್ಯ ಅಧ್ಯಕ್ಷರೆ, ನಮ್ಮ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಪಟ್ಟಣದಲ್ಲಿನ ಪೊಲೀಸ್ ಠಾಣೆಯಲ್ಲಿ 12 ಹುದ್ದೆಗಳು ಖಾಲಿ ಇವೆ, ಆದಷ್ಟು ಬೇಗ ಖಾಲಿಯಿರುವ ಆ ಸ್ಥಾನಗಳನ್ನು ತುಂಬಬೇಕೆಂದು ಮನವಿ ಮಾಡುತ್ತಿದ್ದೇನೆ. ಜೊತೆಗೆ ಅಲ್ಲಿ ಪೋಲೀಸ್ ಸಿಬ್ಬಂದಿಯವರಿಗೆ 25–30 ವರ್ಷಗಳಿಂದ ಹೊಸದಾಗಿ ಮನೆಗಳನ್ನು ಕಟ್ಟಿಸಿಯೇ ಇಲ್ಲ, ಇರುವ ಮನೆಗಳ ರಿಪೇರಿ ಕೂಡ ಆಗಿಲ್ಲ, ಅವು ತುಂಬಾ ಹಾಳಾಗಿ ಹೋಗಿವೆ, ಅವನ್ನು ರಿಪೇರಿ ಮಾಡಿಸಬೇಕು ಮತ್ತು ವಸತಿ ಗೃಹಗಳನ್ನು ಹೊಸದಾಗಿ ಕಟ್ಟಿಸಿ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ ನೇಮಕಾತಿ ಪ್ರಕ್ರಿಯೆ ಪ್ರಾರಂಭ ಆಗಿದೆ, ಆದಷ್ಟು ಬೇಗ, ಪ್ರಕ್ರಿಯೆ ಮುಗಿದ ಮೇಲೆ, 10 ಖಾಲಿ ಇರುವ ಸ್ಥಾನಗಳನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಈಗಾಗಲೇ ಶೇ. 66% ರಷ್ಟು ಸಿಬ್ಬಂದಿಗಳಿಗೆ ಮನೆಗಳಿವೆ, ನಮ್ಮ state average ಸುಮಾರು 44% ಇದೆ. ಹಾಗಾಗಿ ಆದ್ಯತೆ ಮೇಲೆ ಕೊಡುತ್ತಿದ್ದೇವೆ, ಹೆಚ್ಚು ಮನೆಗಳನ್ನು ಕಟ್ಟುವಾಗ ಅವರಿಗೆ ಮನೆಗಳನ್ನು ಒದಗಿಸಿ ಕೊಡಲಾಗುವುದು.

ಅಧ್ಯಕ್ಷರು:– ಅಖಂಡ ಶ್ರೀನಿವಾಸಮೂರ್ತಿ ಇಲ್ಲ, ವಾಸು ಇಲ್ಲ, ವಿಜಯಕುಮಾರ್ ಇಲ್ಲ, ವಿಶ್ವನಾಥ್ ಎಸ್.ಆರ್. ಇಲ್ಲ, ಐಹೊಳೆ ಮಹಾಲಿಂಗಪ್ಪ ಇಲ್ಲ.